ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಕೆಲವು ಮಹಿಳಾಮಣಿಗಳು ಸ್ನಾನಕ್ಕೆ ಹೋದಾಗ ಉದ್ದೇಶಪೂರ್ವಕವಾಗಿ ಟವಲ್ಲನ್ನು*



*ಬಿಟ್ಟುಹೋಗಲು ಕಾರಣ?*
ಅವರ ಉದ್ದೇಶ ಏನೇ ಇರಲಿ, ನೀವೇಕೆ ಕೀಹೋಲ್ ಮೂಲಕ ಇದರ ಬಗ್ಗೆ ಗಮನ ಹರಿಸಿದ್ದೀರಿ?

ಟಿ.ಆರ್. ರವೀಂದ್ರ, ಬೆಂಗಳೂರು
*ಮದುವೆ ವರವೋ ಅಥವಾ ಶಾಪವೋ?*
ಜಾಣ-ಜಾಣೆಯಾದರೆ ವರ, ಕೋಣ-ಕೋಣೆ ಆದರೆ ಶಾಪ.

ಎಸ್. ಶ್ರೀಧರ್, ಬೆಂಗಳೂರು
*ಪ್ರೀತಿಯನ್ನು ಸರಿಯಾದ ಸಮಯಕ್ಕೆ ಹೇಳಲಾಗದ ಪರಿಸ್ಥಿತಿ ತಂದುಕೊಂಡರೆ ಮುಂದೇನಾಗುತ್ತದೆ?*
ಮುಕೇಶನ ಹಾಡುಗಳನ್ನು ಕೇಳುವ ಅಭಿಮಾನಿಗಳ ಸಂಖ್ಯೆ ಹೆಚ್ಚುತ್ತದೆ!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಮ್ಮ ರಾಜಕಾರಣಿಗಳಲ್ಲಿ ಮರ್ಯಾದೆಯ ಮಾತುಗಳೇ ಕಡಿಮೆಯಾಗುತ್ತಿವೆಯಲ್ಲಾ ರಾಂಜೀ?*



ದುರಾಸೆ ನಿಮ್ಮದು! ಬೊಗಳುವ ಬಾಯಿ ಭಗವದ್ಗೀತೆ ನುಡಿದೀತೆ?

ವೀರೇಂದ್ರ ಎಂ. ಮೇಗೂರ, ಧಾರವಾಡ
*ಗರಿಬಿಚ್ಚಿ ಕುಣಿಯುವ ನವಿಲಿಗೂ, ಸಿನಿಮಾದ ಐಟಂ ಸಾಂಗ್ ನರ್ತಕಿಯರಿಗೂ ಏನು ವ್ಯತ್ಯಾಸ?*
ನವಿಲಿನ ನೃತ್ಯ ಚಿತ್ತಾಕರ್ಷಕ, ನರ್ತಕಿಯ ನೃತ್ಯ ವಿತ್ತಾಕರ್ಷಕ!

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ
*ತಂದೆಯ ಒಳಿತಿಗಾಗಿ; ಆದೇಶದಂತೆ ತ್ಯಾಗ ಮಾಡಿದ ಭೀಷ್ಮ, ಪುರು, ರಾಮ, ಇವರೆಲ್ಲರೂ ಆದರ್ಶ ಮಕ್ಕಳೋ, ಬಲಿಪಶುಗಳೋ?*
ಅಪ್ಪ ಹೆಣ್-ಪೆಕ್ಡ್ ಆದರೆ ಮಕ್ಕಳು ಏನಾಗುತ್ತಾರೆಂಬುದಕ್ಕೆ ಸರಿಯಾದ ಉದಾಹರಣೆಗಳು!

ಎ.ಕೆ. ಪಟ್ಟಾಭಿ, ಬೆಂಗಳೂರು
*'ಲವ್ ದೈ ನೈಬರ್' ಎನ್ನುತ್ತದೆ ಇಂಗ್ಲಿಷಿನ ಸುಭಾಷಿತ; ಸರಿಯೇ. ಆದರೆ ಆಕೆಯನ್ನೋ, ಆತನನ್ನೋ?*
ಇದೇ ಪ್ರಶ್ನೆಯನ್ನು ನಿಮ್ಮ ಹೆಂಡತಿ ಮೊನ್ನೆ ಕಳುಹಿಸಿದ್ದರಲ್ಲಾ...! ಮನೆ ಕಡೆ ಜೋಪಾನ!

ಲೀಲಾವತಿ ಎಸ್. ಕರನಂದಿ, ಹುನಗುಂದ
*ಹೆಸರು ರಾಮಚಂದ್ರ; ಆದರೆ ಇಬ್ಬರು ಹೆಂಡತಿಯರ ಗಂಡ ಆಗಿರುವನಲ್ಲ...?*
ಒಬ್ಬಳನ್ನು ಹಾರಿಸಿಕೊಂಡುಹೋದರೆ ಇನ್ನೊಬ್ಬಳು ಇರಲಿ ಎಂದಂತೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಪ್ರೇಮಿಗಳ ಆರಾಧ್ಯದೈವ ಯಾರು?*
ಪಾರ್ಕ್‌ನಲ್ಲಿ ಇರಲು ಸಮ್ಮತಿಸುವ ಪೇದೆ/ಮಾಲಿ, ಅವಸರ ಮಾಡದ ಹೋಟೆಲ್ ಮಾಣಿ, ಮೆಸೇಜ್ ಡೆಲಿವರ್ ಮಾಡುವ ಸ್ನೇಹಿತ/ತೆ....

ಸೀತಾರಾಮಾಚಾರ್, ದಾವಣಗೆರೆ
*ಯುವಕರಿಗೆ ಅಧಿಕಾರ ಎಂದರು ರಾಹುಲ್; ಹಾಗಾದರೆ ಮುದಿತಲೆಗಳ ಭವಿಷ್ಯ?*
ರಸ್ತೆಗೊಂದು ಮಾರ್ಗಸೂಚಿ ಬೇಕು; ಯುವಕ ರಸ್ತೆಯಾಗಲಿ, ಮುದಿತಲೆ ಮಾರ್ಗಸೂಚಿ!

ಟಿ.ಎಂ. ಮಾನಪ್ಪ, ಶಿವಮೊಗ್ಗ
*ಮಹಿಳೆಯರ ಮಾಂಗಲ್ಯಸರ ಕಳ್ಳತನ ಈಗಂತೂ ಬಹಳ ಜಾಸ್ತಿಯಾಗಿದೆ. ಇದಕ್ಕೆ ಪರಿಹಾರ ಎಲ್ಲಿದೆ?*
ದುಪ್ಪಟ್ಟಾದಲ್ಲಿ, ಸೆರಗಿನಲ್ಲಿ!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ
*ಮೂರ್ತಿಪೂಜೆಗೂ, ನಿರಾಕಾರ ಪೂಜೆಗೂ ವ್ಯತ್ಯಾಸವೇನು?*
ಮೂರ್ತಿಪೂಜೆ ಸ್ಥಾವರ, ನಿರಾಕಾರಪೂಜೆ ಜಂಗಮ!

## ಬಹುಮಾನಿತ ಪ್ರಶ್ನೆ

ಎಂ.ಎನ್. ಸೋಮಶೇಖರ್, ಮೈಸೂರು
*ಚಿತೆಗೇರಿಸುವ ಮುನ್ನ ಹೆಣ ಎದ್ದು ಕುಳಿತರೆ...?*
ದಹನಶುಲ್ಕ ವೇಸ್ಟ್ ಆಗುತ್ತಲ್ಲಾಂತ ಚಿತೆಯ ಸೌದೆಯಲ್ಲೇ ಹೊಡೆದು ಮತ್ತೆ ಮಲಗಿಸುತ್ತಾರೆ!

ಹಾಡ್ಯ ಬಿ. ಜಯಾನಂದ, ಮೈಸೂರು
*ಪ್ರೇಮಕ್ಕೆ ಕಣ್ಣಿಲ್ಲ ಅಂತಾರೆ. ಕಿವಿ, ಮೂಗೂ ಇಲ್ಲವೆ?*
ಇವೆಯಲ್ಲಾ! ಕದ್ದು ಕೇಳುವವರ ಕಿವಿ, ಮೂಗು ತೂರಿಸುವವರ ಮೂಗು!

ಡೈರಿ ವಿಶ್ವನಾಥ್, ಬೆಂಗಳೂರು
*ಜಾತಿಯಿಲ್ಲದೆ ಬದುಕಲು ಆಗದೆ?*
ಸರ್ಕಾರದಿಂದ, ಸಮಾಜದಿಂದ ಏನನ್ನೂ ಅಪೇಕ್ಷಿಸದಿದ್ದರೆ ಸಾಧ್ಯ!

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
*ಏನು! ಬದುಕಿಗೆ ಸಾವಿಲ್ಲವೆ?*




ಬದುಕಿಗೆ ಇದೆ; ಆದರೆ 'ಬದುಕು' ಸೀರಿಯಲ್ ಮಾತ್ರ ಚಿರಂಜೀವಿಯೋ ಏನೋ...

ಆರ್. ಮಧುಸೂದನ್, ಹಾಸನ
*ಪಾಪಿ ಚಿರಾಯು ಅಂತಾರೆ. ಹಾಗಾದರೆ ದೀರ್ಘಾಯುಷಿಗಳೆಲ್ಲಾ ಪಾಪಿಗಳಾ?*
ದೀರ್ಘಾಯುಷಿ ದೀರ್ಘಾಯುಷಿಯಷ್ಟೆ; ಪಾಪಿ ಚಿ – ಚಿದ್ರಕ, ರಾ – ರಾಕ್ಷಸ, ಯು – ಯುದ್ಧನಿರತ!

ರವಿ ಎಂ. ಪೈ, ಹೊನ್ನಾವರ
*ಜಲವೇ ಜಗದ ಜೀವ; ಏಕೆ?*
ಜಲವನ್ನು ಸೇರಿಸದೆ ಹಾಗೇ ಏರಿಸಿದರೆ ಜೀವ ಬೇಗ ಹೋಗಿಬಿಡುವುದರಿಂದ!

ರಮೇಶ. ಜಿ. ಬೊಂಗಾಳೆ, ಬೈಲಹೊಂಗಲ
*ಜೀವನದ ಅಮೂಲ್ಯ ಕ್ಷಣ ಯಾವುದು ಸಾರ್?*
ಈ ಕ್ಷಣ!

■ ರಾಮ್